
ಕೋಟೆಯ ಒಳ ಹೊಕ್ಕೆ, ಪ್ರವೇಶದಲ್ಲಿಯೇ ದೊಡ್ಡದಾದ ನೀರಿನ ದೊಣೆ. ಇಲ್ಲಿ ಬಂಡೆ ಮತ್ತು ಕಾಡಿನ ನಡುವೆ ಒಂದು ಕ್ಷಣ ಮೇಲೆ ಹೋಗುವುದು ಹೇಗೆ ಎಂದು ದಿಕ್ಕು ತೋಚದೆ ತಬ್ಬಿಬ್ಬು. ಎಡಕ್ಕಿದ್ದ ಕೋಟೆಗೋಡೆ ಬದಿಯಲ್ಲಿ ನಡೆದೆ, ಬಂಡೆಯ ಮೇಲಿನ ಸವೆದ ಮೆಟ್ಟಿಲುಗಳ ಸುಳಿವು ಸಿಕ್ಕಿತು. ಹತ್ತಿದಾಗ ಅಲ್ಲಿ ನೀರಿನ ಇನ್ನೊಂದು ದೊಣೆ. ಅದರಾಚೆ ಎದುರಿಗಿದ್ದದ್ದು ಗುರುತಿಸಲಾಗದಷ್ಟು ಅಡ್ಡಾದಿಡ್ಡಿ ಬಿದ್ದ ಕಲ್ಲಿನ ರಾಶಿ. ಏರುತ್ತಾ ಹೋದ ಈ ಜಾಡು, ಒಂದೆಡೆಗೆ ತಂದು ನಿಲ್ಲಿಸಿತು. ಅಲ್ಲಿ ನಾಲ್ಕು ತೋರುಗಲ್ಲುಗಳು ನಿಂತಿದ್ದವು. ಬಹುಶಃ ಅಲ್ಲೊಂದು ಕಲ್ಲಿನ ಬಾಗಿಲಿದ್ದಿರಬೇಕು. ಬಲಕ್ಕೆ ತಿರುಗಿದಾಗ ದೊಡ್ಡ ಬಂಡೆಯ ಶಿಖರದೆತ್ತರದ 'ಶಂಕರ ಕುಂಭಿ'ಯಲ್ಲಿ ಶಂಕರೇಶ್ವರ ದೇವಸ್ಥಾನದ ಗೋಪುರದ ಭಾಗ ಕಂಡಿತು. ಬಂಡೆಯ ಬುಡದಲ್ಲಿ ಎಡಕ್ಕೆ ಒಂದು ಶಿಥಿಲವಾದ ಮಂಟಪದಲ್ಲಿ, ನಂದಿಯ ವಿಗ್ರಹ. ಮತ್ತೆ ಸ್ವಲ್ಪವೇ ಎತ್ತರವಾದರೂ ಕುಸಿದೇ ಹೋದ ಮೆಟ್ಟಿಲುಗಳನ್ನು ಎಚ್ಚರಿಕೆಯಿಂದ ಹತ್ತಿದಾಗ, ದೇವಾಲಯ ನಿಂತ ವಿಶಾಲವಾದ ಬಂಡೆಯ ಮೇಲ್ಭಾಗಕ್ಕೆ ಬಂದಿದ್ದೆ. ಪುಟ್ಟ ಗುಡಿ, ಅದರ ಎಡಭಾಗದಲ್ಲಿ ಕಲ್ಲು ಕಂಬಗಳ ದೊಡ್ಡ ಹಜಾರ. ಗುಡಿಯ ಹತ್ತಿರದಲ್ಲಿ ಶಿಥಿಲವಾದ ಒಂದು ಹಗೇವು. ದೇವಾಲಯದ ಮುಂಭಾಗದಲ್ಲಿ ಬಂಡೆಗಳ ನಡುವೆ ಆಳವಾದ 'ದೊಡ್ಡ ದೊಣೆ' ಎಂಬ ನೀರಿನ ಚಿಲುಮೆ. ಈ ಪುಟ್ಟ ಗುಡಿಯಲ್ಲಿ ಇರುವ ಲಿಂಗವನ್ನು ಶಂಕರಾಚಾರ್ಯರು ಸ್ಥಾಪಿಸಿದರೆಂದು ಹೇಳುತ್ತಾರೆ.

ತುತ್ತತುದಿಯ ಈ ಬಂಡೆಯನ್ನು ಸುತ್ತುವರೆದ ಕಡೆಯ ಕೋಟೆಗೋಡೆಯ ಒಳಗೇ, ಎತ್ತರದ ಮಣ್ಣಗೋಡೆಯಿಂದ ಸುತ್ತುವರೆದ ಬಂದೀಖಾನೆಯಿತ್ತು. ಅದರಿಂದ ಜೇಮ್ಸ್ ಬ್ರಿಸ್ಟನ್ ಮಧ್ಯರಾತ್ರಿಯ ಹೊತ್ತಿನಲ್ಲಿ ತಾನು ಕೊರೆದ ಸುರಂಗದ ಮೂಲಕ ತಪ್ಪಿಸಿಕೊಂಡು, ಕಲ್ಲಿನ ಕೋಟೆಗೋಡೆಯನ್ನು ದಾಟಿ ಹೊರಬಂದು, ಕಡಿದಾದ ಬಂಡೆಯ ಮೇಲೆ ಮಂಡಿಯೂರಿ ತೆವಳಿದರೂ, ಉರುಳುರುಳಿ ಆಳಕ್ಕೆ ಪ್ರಪಾತಕ್ಕೆ ಬಿದ್ದಿದ್ದ. ಬೆಟ್ಟದ ಬುಡದ ಗಿಡಮರ ಕೊಂಬೆಗಳು, ಪೊದರುಗಳಲ್ಲಿ ಸಿಕ್ಕಿಬಿದ್ದು ಆತನ ಜೀವ ಉಳಿದಿತ್ತು. ಹುಲಿಗಳು ಯಥೇಚ್ಛವಾಗಿದ್ದ ದಟ್ಟ ಅರಣ್ಯದಲ್ಲಿ ಅದು ಹೇಗೋ ಬದುಕಿ ಉಳಿದು, ದಿನಗಟ್ಟಲೆ ನೀರು, ಆಹಾರವಿಲ್ಲದೆ ನಿರ್ಜನ ಪ್ರದೇಶಗಳನ್ನು ಹಾದು ಕಡೆಗೊಂದು ತಾಣದಲ್ಲಿ ನಿತ್ರಾಣವಾಗಿ ಬಿದ್ದಿದ್ದ. ಹತ್ತಿರದ ಹಳ್ಳಿಯ ಹೆಂಗಸೊಬ್ಬಳು, ರಾಗಿಯ ರೊಟ್ಟಿ ಕೊಟ್ಟು ಜೀವ ಉಳಿಸಿದ್ದಳು. ಏನೆಲ್ಲ ಇತಿಹಾಸವನ್ನು ಈ ಬೆಟ್ಟ ಪಿಸುನುಡಿಯುತ್ತಿತ್ತು!

ಶಂಕರ ಕುಂಭಿಯಿಂದ ಕೆಳಗಿಳಿದು ಬಂದಾಗ, ನನ್ನ ಬಲಕ್ಕೆ ಒಂದು ಸಣ್ಣ ಬಂಡೆಯ ಮೇಲೆ ಹಳೆಯ ಸವೆದ ಮೆಟ್ಟಿಲುಗಳನ್ನು ಕಂಡು ಅತ್ತ ಹೋದೆ. ಆ ಜಾಡು ಮೂರು ಬಂಡೆಗಳ ನಡುವೆ ರೂಪುಗೊಂಡ ಸಣ್ಣ ಸುರಂಗದಂತಹ ಹಾದಿಯ ಮೂಲಕ, ಏರು ಎತ್ತರದ ಬಂಡೆಯ ಬದಿಯ ಇಕ್ಕಟ್ಟಿನ ಮೆಟ್ಟಿಲುಗಳಲ್ಲಿ ಒಂದಿಷ್ಟು ಕೆಳಗಿಳಿಸಿತು. ಬಗಲಿನ ಮತ್ತೊಂದು ಬೆಟ್ಟದ ವಿಶಾಲವಾದ ಸಮತಟ್ಟು ಪ್ರದೇಶಕ್ಕೆ ತಲುಪಿದ್ದೆ. ಅಲ್ಲಿ ತೆರೆದ ಜಾಗದ ಒಂದೆಡೆಗೆ ಏರುಬಂಡೆಗಳು ಸುತ್ತುವರೆದಿದ್ದು, ಅದೊಂದು ಆಂಫಿಥಿಯೇಟರ್‌ನಂತೆ ಕಂಡಿತು.



ಮೂರು ಬಂಡೆಗಳ ಮೂಲಕ 'ಓಲಗದರೆ ಬೆಟ್ಟ'ಕ್ಕೆ ಕೊಂಡೊಯ್ಯುವ ಸಣ್ಣ ಸುರಂಗ

ಆರ್ಕಿಯಾಲೊಜಿಕಲ್ ರಿಪೋರ್ಟ್ ಉಲ್ಲೇಖಿಸಿದ 'ಓಲಗದರೆ ಬೆಟ್ಟ' ಇದೇ ಇರಬಹುದೆ? 'ಓಲಗದರೆ' ಬೆಟ್ಟದಲ್ಲಿ ನೃತ್ಯಕೂಟಗಳು ನಡೆಯುತ್ತಿದ್ದವು ಎಂದು ರಿಪೋರ್ಟ್ ತಿಳಿಸಿತ್ತು. ಇಲ್ಲಿ ಒಂದು ಎತ್ತರದ ಪೀಠದಂತಹ ತಾಣವೂ ಕಂಡಿತು.

ಇನ್ನೊಂದು ದಿಕ್ಕಿಗೆ, ಕುಸಿದ ಕಟ್ಟಡದ ಅವಶೇಷದ ಅಂಚಿನಲ್ಲಿ ನೇರ ನಿಂತ ಹಲವಾರು ಕಲ್ಲಿನ ಕಂಬಗಳಿದ್ದವು. ಅಲ್ಲೇ ಹತ್ತಿರದಲ್ಲಿ ಅರ್ಧ ಮುರಿದ ಬೀಸುಗಲ್ಲಿನ ಕೆಳಭಾಗ ಕಂಡಾಗ, ಈ ಕಟ್ಟಡ 'ಕೃಷ್ಣ ದೇವಾಲಯ'ವೇ ಇರಬೇಕು ಅನಿಸಿತು. ಆರ್ಕಿಯಾಲೊಜಿಕಲ್ ರಿಪೋರ್ಟ್, ಕುಸಿದು ಬಿದ್ದ ಕೃಷ್ಣ ದೇವಾಲಯದ ಬಳಿ, 'ಲೋವರ್ ಹಾಫ್ ಆಫ್ ಮಿಲ್‌ಸ್ಟೋನ್' ಕಂಡದ್ದನ್ನು ತಿಳಿಸುತ್ತದೆ.

ಇಲ್ಲಿಂದ ಹಿಂತಿರುಗುವಾಗ, ನನ್ನ ಬಲಕ್ಕೆ ಹುತ್ರಿಬೆಟ್ಟದ ಇನ್ನೊಂದು ಎತ್ತರದ ಜಾಗದಲ್ಲಿ ಶಿಥಿಲವಾದ ಕಟ್ಟಡವೊಂದು ಕಂಡಿತು. ಹತ್ತಿರ ಹೋಗಿ ಪರಿಶೀಲಿಸಿದಾಗ, ಪಾಳುಬಿದ್ದ ಈ ಕಟ್ಟಡ ಆರ್ಕಿಯಾಲೊಜಿಕಲ್ ರಿಪೋರ್ಟ್ ಉಲ್ಲೇಖಿಸುವ 'ಪೌಂಡರ್ ಮ್ಯಾಗಜೀನ್', ಅಂದರೆ 'ಗನ್‌ಪೌಡರ್'ನಂತಹ ಸ್ಫೋಟಕ ವಸ್ತುವನ್ನು ಸಂಗ್ರಹಿಸಿ ಇಡಲು ಕಟ್ಟಿದ ಕಟ್ಟಡ ಆಗಿದ್ದಿರಬಹುದು ಅನಿಸಿತು. ಕುಸಿದ ಕಟ್ಟಡದ ಒಳಹೊಕ್ಕೆ, ಕಲ್ಲಿನ ಕಂಬಗಳಿದ್ದವು, ಅದು ಗುಡಿ ಅಂತೂ ಆದಂತಿರಲಿಲ್ಲ. ಆದರೆ ಒಂದು ಕಂಬದಲ್ಲಿ ಮತ್ತೆ ಋಷ್ಯಶೃಂಗನ ಕೆತ್ತನೆ! ಇದರಾಚೆಗೆ ಮೇಲೇರಿದ ಬಂಡೆಯ ಮೇಲೆ ಪುರಾತನ ಮೆಟ್ಟಿಲುಗಳು, ಶಂಕರ ಕುಂಭಿಗಿಂತ ಕೊಂಚ ಎತ್ತರವಿರುವ ಜಾಗಕ್ಕೆ ಕೊಂಡೊಯ್ದಿತು. ಬಹುಶಃ ಪಾಳೆಗಾರನ ಬಾವುಟ ಹಾರುತ್ತಿದ್ದ ತಾಣ, ಆರ್ಕಿಯಾಲೊಜಿಕಲ್ ರಿಪೋರ್ಟ್ ಉಲ್ಲೇಖಿಸುವ 'ನಿಶಾನಿ ಗುಂಡು' ಅದೇ ಇರಬಹುದು. ಶೋಧಿಸಿದಷ್ಟೂ ಆ ದುರ್ಗದಲ್ಲಿ ಹೆಜ್ಜೆ ಹೆಜ್ಜೆಗೆ ತೆರೆದುಕೊಳ್ಳುತ್ತದೆ ಇತಿಹಾಸದ ಗುಟ್ಟುಗಳು. ಮನಸ್ಸು ತೃಪ್ತಿಯಾಗುವವರೆಗೂ ಅಲೆದಾಡಿ, ಕೆಳಗಿಳಿದು ಬಂದಿದ್ದೆ.

* * *

ಮತ್ತೆ ಹಲವಾರು ಬಾರಿ ಹುತ್ರಿದುರ್ಗ ಬೆಟ್ಟವನ್ನು ಚಾರಣ ಮಾಡಿದ್ದೇನೆ. ಇದೀಗ ಅಲ್ಲಿ ಬೃಹತ್ ಬಂಡೆಗಳ ಮೇಲೆ, ಕಿರಿದಾದ ಪುರಾತನ ಮೆಟ್ಟಿಲುಗಳ ಬಗಲಲ್ಲಿ ಅಗಲವಾದ ಹೊಸ ಮೆಟ್ಟಿಲುಗಳನ್ನು ಕೆತ್ತಿದ್ದಾರೆ. ಅತ್ಯಂತ ಕಡಿದಾದ ಜಾರುಬಂಡೆಗಳ ಭಾಗದಲ್ಲಿ ತಡೆಕಂಬಿಗಳನ್ನು ನೆಟ್ಟಿದ್ದಾರೆ. ಅನೇಕ ಕಡೆ 'ಅಪಾಯ' ಎಂದು ದೊಡ್ಡ ಅಕ್ಷರಗಳಲ್ಲಿ ಬರೆದಿದ್ದಾರೆ.

'ದೊಡ್ಡ ದೊಣೆ'ಯ ಬಂಡೆಯ ದಂಡೆಯ ಮೇಲೆ 'ಆಳವಾದ ನೀರು' ಎಂದು ಎಚ್ಚರಿಕೆ ಬರೆದಿತ್ತು, ಇತ್ತೀಚಿನ ದಿನಗಳಲ್ಲಿ ಅದರ ಸುತ್ತಲೂ ಕಂಬಿಯ ತಡೆ ಹಾಕಿದ್ದಾರೆ. ದಿಕ್ಕು ತಪ್ಪುವಂತಹ ಸ್ಥಳಗಳಲ್ಲಿ, ಬಿಳಿಯ ಬಾಣದ ಗುರುತು ದಾರಿ ತೋರಿಸುತ್ತದೆ. ಇಂದು ಹುತ್ರಿದುರ್ಗ ಬೆಟ್ಟವನ್ನು ಚಾರಣಿಗರಲ್ಲದವರೂ, ಸುಲಭವಾಗಿ, ಸುರಕ್ಷಿತವಾಗಿ ಹತ್ತಬಹುದಾಗಿದೆ.

(ಕನ್ನಡಕ್ಕೆ: ನೇಮಿಚಂದ್ರ)

ಪ್ರತಿಕ್ರಿಯಿಸಿ: **feedback@sudha.co.in**